Sri GANJI VEERAPPA.—May I know under whose control these technical institutions function, the D.P.I. or the Director of Technical Education?

Sri S. R. KANTHI.—It is under the D.P.I.

ಶ್ರೀ ಟಿ. ಮಾದಯ್ಯ ಗೌಡ.—ರಾಮನಗರದ ಮಲ್ಟಿಪರ್‌ಪಸ್ ಹೈಸ್ಕೂಲಿನಲ್ಲಿ ಸ್ಥಳ ಇದ್ದೂ ಕೂಡ ಉಪಾಧ್ಯಾಯರು ಇಲ್ಲದೇ ತೊಂದರೆಯಾಗುತ್ತಾ ಇರುವುದು ಗೊತ್ತೆ?

ಶ್ರೀ ಎಸ್. ಆರ್. ಕಂಠಿ.—ಆ ಸಮಾಚಾರ ನನ್ನ ಹತ್ತಿರ ಇಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಜಾಗವೂ ಇಲ್ಲದೇ, ಸ್ಯಾಂಪೂ ಇಲ್ಲದೇ ಸ್ಕೂಲು ಏಕೆ ತೆಗೆಯುತ್ತಾ ಇದ್ದೀರಿ; ದುಡ್ಡು ಜಾಸ್ತಿಯಾಗಿದೆಯೇ?

ಶ್ರೀ ಎಸ್. ಆರ್. ಕಂಠಿ.—ಚಿಕ್ಕಮಗಳೂರಿನಲ್ಲಿ ಜಾಗ ಇರಲಿಲ್ಲ, ಈಗ ಹೊಸದಾಗಿ ಬಿಲ್ಡಿಂಗ್ ಸಿದ್ಧವಾಗುತ್ತಾ ಇದೆ.

ಶ್ರೀ ಟಿ. ಮಾದಯ್ಯ ಗೌಡ.—ಜಾಗವೂ ಇಲ್ಲದೆ, ಉಪಾಧ್ಯಾಯರೂ ಇಲ್ಲದೇ ಅನೇಕ ವರ್ಷಗಳಿಂದ ಇಂಥಾ ಮೆಷಿನರಿಗಳನ್ನು ಪ್ರೊವೈಡ್ ಮಾಡುವುದಕ್ಕೆ ಕಾರಣವೇನು?

ಶ್ರೀ ಎಸ್. ಆರ್. ಕಂಠಿ.—ಆಗಲೇ ಉತ್ತರ ಹೇಳಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ರಿಸೋರ್‌ಸಸ್ ಅಂಡ್ ಎಕಾನಮಿ ಕಮಿಟಿಯವರು ಈ ಮಲ್ಟಿಪರ್‌ಪಸ್ ಹೈಸ್ಕೂಲುಗಳ ವಿಷಯದಲ್ಲಿ ಸರ್ಕಾರದವರಿಗೆ ಏನು ಅಭಿಪ್ರಾಯ ಕೊಟ್ಟಿದ್ದಾರೆ?

ಶ್ರೀ ಎಸ್. ಆರ್. ಕಂಠಿ.—ಪ್ಲಾಪಕ ಇಲ್ಲ; ನೋಡಿ ಹೇಳುತ್ತೇನೆ.

Steps taken to control the rising Prices of essential Commodities

*Q.—143. **Sri VEERABHADRAPPA ERAPPA** (Yelburga).—

Will the Government to be pleased to state:—

(*a*) whether it has come to their notice that prices of essential commodities are rising abnormally;

(*b*) if so, the action they have taken to control the rising prices;

(*c*) whether fair price Depots have been opened in the Districts where scarcity conditions are prevailing;

(*d*) the number of such Depots that have been opened in each District?

A.—**Sri M. V. KRISHNAPPA** (Minister for Revenue):—

(*a*) No, on the other hand there is a slight downward trend in prices.

(*b*) The following steps have been taken to check possible rise in prices:—

1. Opening of Fair price shops.
2. Promulgation of control orders.
3. Opening of consumers Co-operative Stores.
4. Giving encouragement to well managed Co-operatives to help them to build up stocks of paddy and rice and release the same to consumers at the appropriate time.

(*c*) Yes.

(*d*) 1433. statement given below:—

Statement showing the number of Fair Price Shops in the State as on the 1st February 1963.

1	Bangalore City	...	349
2	Bangalore Rural District	}	180
3	Bangalore Urban District	}	
4	Kolar	...	118
5	Tumkur	...	126
6	Chitradurga	...	90
7	Bellary	...	45
8	Mysore	...	117
9	Mandya	...	1
10	Hassan	...	10
11	Shimoga	...	20
12	Chickmagalur	...	15
13	Coorg	...	3
14	South Kanara	...	25
15	Belgaum	...	69
16	Dharwar	...	41
17	North Kanara	...	23
18	Bijapur	...	145
19	Gulbarga	...	44
20	Raichur	...	Nil
21	Bidar	...	12
	Total	...	1,433

ಶ್ರೀ ವೀರಭದ್ರಪ್ಪ ಈರಪ್ಪ.—ರಾಯಚೂರು ಜಿಲ್ಲೆಯಲ್ಲಿ ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆದಿಲ್ಲ, ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಹುಶಃ ಅಗಿನ ಪರಿಸ್ಥಿತಿಯಲ್ಲಿ ಡಿಪೋ ಬೇಕೆಂದು ಅಲ್ಲಿನ ಜನಗಳೂ ಕೇಳಲಿಲ್ಲ ಎಂದು ಕಾಣುತ್ತದೆ.

ಶ್ರೀ ವೀರಭದ್ರಪ್ಪ ಈರಪ್ಪ.—ಈ ಜನಗಳೂ ನ್ಯಾಯ ಬೆಲೆಯ ಅಂಗಡಿಗಳನ್ನು ಇಡ ಬೇಕೆಂದರೆ, ಇಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ದೇಶದಲ್ಲಿ ಬೆಲೆ ಇಳಿದು ರೈತರಿಗೆ ಸರಿಯಾದ ಬೆಲೆ ಸಿಕ್ಕುತ್ತಾ ಇಲ್ಲ ಮತ್ತು ಆಹಾರ ವಸ್ತುಗಳ ಬೆಲೆ ಇಳಿದಿರುವುದರಿಂದ ಫೇರ್ ಪ್ರೈಸ್ ಡಿಪೋ ಇಡಬೇಕಾದ ಪ್ರಮೇಯವಿಲ್ಲ. ಬೆಲೆ ಹೆಚ್ಚಿದಾಗ ನಮ್ಮ ಗಮನಕ್ಕೆ ತಂದರೆ ಯೋಚನೆ ಮಾಡಬಹುದು.

Sri S. M. KRISHNA.—May I know the essential commodities which are showing a downward trend in prices ?

Sri M. V. KRISHNAPPA.—All foodgrains. The hon. Member has asked about opening of fair Price shops in question (*c*) though he refers to "essential Commodities" in (*a*). Therefore, we presumed that the hon. Member has only foodgrains in mind when he asked the question and my answer is that prices of foodgrains are going down.

Sri S. M. KRISHNA.—Has it come to the notice of Government that very recently the Union Minister, Sri Nanda gave a warning that there is likelihood of prices of essential commodities going up ? Has it not gone up in several cases ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು 'essential' ಅನ್ನುವ ಪದಕ್ಕೆ ಏನು ಅರ್ಥ ಕೊಡುತ್ತಾರೆ ಅನ್ನುವುದರಲ್ಲಿ ಇದೆ.

For me essential commodities means foodgrains, for the Industries it means things like cement, oil and raw material.

In-patient Beds in the Tuberculosis Clinic Hospital at Tumkur.

*Q.—180. Sri T. S. SIVANNA (Madhugiri).—

Will the Government be pleased to state :—

(*a*) the number of inpatient beds in the Tuberculosis Clinic Hospital at Tumkur ;

(*b*) whether it has come to the notice of the Government that many T. B. Patients are refused admission for want of accommodation in the said clinic;

(*c*) whether it has come to the notice of the Government that one unit of the building attached to this Hospital, when it was a General Hospital, was given over to locate the District Development Office, thus causing the paucity of building accommodation in this Clinic ;

(*d*) whether they intend to handover it back to the T. B. Clinic to facilitate more admission of T. B. patients ?

A.—Sri K. NAGAPPA ALVA (Minister for Health).—

(*a*) 18 Beds.
(*b*) No.
(*c*) Yes.
(*d*) Will be considered.

ಶ್ರೀ ಟಿ. ಎಸ್. ಶಿವಣ್ಣ.—ಜಿಲ್ಲಾಭಿವೃದ್ಧಿ ಸಮಿತಿಗೆ ಈ ಆಸ್ಪತ್ರೆ ಕಟ್ಟಡದ ಒಂದು ಭಾಗವನ್ನು ಬಿಟ್ಟು ಕೊಡಲು ಕಾರಣವೇನು ? ಈ ಕಟ್ಟಡವನ್ನು ಪಿ. ಡಬ್ಲ್ಯೂ. ಡಿ. ಗೆ ವಹಿಸಲು ಕಾರಣವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಹೀಗೆ ಬಿಲ್ಡಿಂಗುಗಳನ್ನು ಒಂದು ಸಂಸ್ಥೆಯಿಂದ ಇನ್ನೊಂದು ಸಂಸ್ಥೆಗೆ ಬದಲಾಯಿಸುವಾಗ ಪಿ. ಡಬ್ಲ್ಯೂ. ಡಿ. ಗೆ ಕೊಡಲಾಗುತ್ತದೆ.

ಶ್ರೀ ಟಿ. ಎಸ್. ಶಿವಣ್ಣ.—ಆ ಆಸ್ಪತ್ರೆಗೆ ಬರತಕ್ಕ ರೋಗಿಗಳಿಗೆ ಅಲ್ಲಿ ಸ್ಥಳಾವಕಾಶವಿಲ್ಲದಿರುವಾಗ ಆ ಜಿಲ್ಲಾಭಿವೃದ್ಧಿ ಸಮಿತಿಗೆ ಯಾವ ಕಾರಣದಿಂದ ಹೇಗೆ ಬಿಟ್ಟು ಕೊಡಲಾಯಿತು ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೆ ಬಿಟ್ಟು ಕೊಡುವಾಗ ಅಲ್ಲಿಯ ರೋಗಿಗಳಿಗೆ ಸ್ಥಳಾವಕಾಶ ಸಾಕಷ್ಟು ಇತ್ತು. ಕೊರತೆಯೇನೂ ಇರಲಿಲ್ಲ.

ಶ್ರೀ ಟಿ. ಎಸ್. ಶಿವಣ್ಣ.—ಈಗ ಆ ಆಸ್ಪತ್ರೆಗೆ ಬರುತ್ತಿರುವ ರೋಗಿಗಳ ಸಂಖ್ಯೆ ದಿನ ದಿನಕ್ಕೂ ಜಾಸ್ತಿಯಾಗುತ್ತಿದೆಯೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ.

ಶ್ರೀ ಬಿ. ಚನ್ನಬ್ಯೆರೇಗೌಡ.—ಅಲ್ಲಿ ಕೇವಲ 18 ಬೆಡ್‌ಗಳಿರುತ್ತವೆಂದು ಹೇಳಲಾಗಿದೆ. ಅಂದರೆ ಆ ಆಸ್ಪತ್ರೆಗೆ 18 ಜನಕ್ಕಿಂತ ಹೆಚ್ಚಾಗಿ ರೋಗಿಗಳು ಬರುವುದಿಲ್ಲವೆಂತ ಅಭಿಪ್ರಾಯವೋ ?

ಶ್ರೀ ಕೆ. ನಾಗಪ್ಪ ಆಳ್ವ.—ಆಸ್ಪತ್ರೆಗೆ ಬರತಕ್ಕವರೆಲ್ಲರಿಗೂ ಅವಕಾಶ ಕಲ್ಪಿಸಬೇಕೆಂದರೆ ಕಷ್ಟವಿದೆ.

ಶ್ರೀ ಬಿ. ಚನ್ನಬ್ಯೆರೇಗೌಡ.—ರೋಗಿಗಳೂ ಹೆಚ್ಚು ಸಂಖ್ಯೆಯಲ್ಲಿ ಬರುತ್ತಿದ್ದರೆ ಆಗಲಾದರೂ ಈ ಬೆಡ್‌ಗಳನ್ನು ಜಾಸ್ತಿಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿಚಾರವನ್ನು ಪರಿಶೀಲನೆ ಮಾಡುತ್ತೇವೆ.